ಮಯೂರ ವಿಶೇಷ

# ಹಿಮಾಂಶಿ ಇಂದುಲಾಲ್ ಶೆಲತ್

## ಸಾಮಾಜಿಕ ಬದ್ಧತೆ – ಸಾಹಿತ್ಯಪ್ರೀತಿಯ ವಿಶಿಷ್ಟ ಸಮೀಕರಣ




ಗುಜರಾತಿ ಮೂಲ: **ಶರೀಫಾ ವಿಜಲಿವಾಲಾ**
ಇಂಗ್ಲಿಷ್‌ಗೆ: **ಪ್ರತಿಷ್ಠಾ ಪಾಂಡ್ಯಾ**

ಕುಪ್ಪಳಿಯ 'ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ'ದ 'ಕುವೆಂಪು ರಾಷ್ಟ್ರೀಯ ಪುರಸ್ಕಾರ 2024'ಕ್ಕೆ ಪಾತ್ರರಾದ ಗುಜರಾತಿ ಲೇಖಕಿ ಹಿಮಾಂಶಿ ಇಂದುಲಾಲ್ ಶೆಲತ್ ಅವರದು ಸಮಕಾಲೀನ ಭಾರತೀಯ ಬರಹಗಾರರಲ್ಲಿ ಪ್ರಮುಖ ಹೆಸರು. ಕುವೆಂಪು ಅವರ ಆಶಯಗಳನ್ನು ಹಿಮಾಂಶಿ ಅವರ ಕಥೆಗಳಲ್ಲೂ ಕಾಣಬಹುದು.

ಸೂರತ್‌ನ ಮೇಲ್ವರ್ಗದ ಕುಟುಂಬದಲ್ಲಿ ಹುಟ್ಟಿದ ಹಿಮಾಂಶಿ ಇಂದುಲಾಲ್ ಶೆಲತ್ ಅವರು ಓದಿದ್ದು ಇಂಗ್ಲಿಷ್ ಸಾಹಿತ್ಯ. ಇಂಗ್ಲಿಷ್ ಉಪನ್ಯಾಸಕರಾಗಿ ವೃತ್ತಿ ನಿರ್ವಹಿಸಿದರು. ಆದರೆ ಅವರು ತಮ್ಮ ಎಲ್ಲ ಸೃಜನಶೀಲ ಕೃತಿಗಳನ್ನು ಮಾತೃಭಾಷೆ ಗುಜರಾತಿಯಲ್ಲಿಯೇ ಬರೆದಿದ್ದಾರೆ. 1947ರ ಜನವರಿ 8ರಂದು ಹುಟ್ಟಿದ ಅವರ ಬರಹದ ವ್ಯಾಪ್ತಿ ಬಹುವಿಸ್ತಾರವಾದುದು.

ಹಿಮಾಂಶಿ ಶೆಲತ್ ಅವರ ಸಾಹಿತ್ಯ ಕೃಷಿಯು ಬಹುವಿಸ್ತಾರವಾದುದು ಮಾತ್ರವಲ್ಲ, ವೈವಿಧ್ಯಮಯವಾದುದು ಕೂಡ. ಅವರು ಪ್ರಕಟಿಸಿದ ಕೃತಿಗಳನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ಅವರು 12 ಸಣ್ಣಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಎರಡು ಕಾದಂಬರಿ, ಎರಡು ನೀಳ್ಗತೆಗಳು, ಮೂರು ಸ್ಮೃತಿಗಳು ಮತ್ತು ಮೂರು ಅನುವಾದಿತ